# ಬಾಯಿ ಖಾಲಿ ಇರ್ಬೇಕಲ್ಲಾ...



ಶಹಾಬಾದದಲ್ಲಿ ಶಿಕ್ಷಕಿಯಾಗಿರುವ ನನ್ನ ಮಗಳ ಮಗಳೇ ಕೃತಿಕಾ. ನಾಲ್ಕು ವರ್ಷದ ತುಂಟಿ, ಮಾತಿನಲ್ಲಿ ಚಾಲಾಕಿ. ಎಂದಿನಂತೆ, ಆ ಸಂಜೆ ಮೊಬೈಲ್‌ನಲ್ಲಿ ನನ್ನೊಂದಿಗೆ ಮಾತನಾಡುತ್ತ, 'ತಾತಾ, ಅಜ್ಜಿ ಕೈಗೆ ಫೋನ್ ಕೊಡು' ಅಂದಳು.

'ಇಲ್ಲ ಪುಟ್ಟಾ, ಅಜ್ಜಿ ಈಗ ಊಟ ಮಾಡುತ್ತಿದ್ದಾಳೆ, ಕೈ ಖಾಲಿ ಇಲ್ಲ' ಅಂದೆ.

'ಅವಳೇನೂ ಎರಡೂ ಕೈಯಲ್ಲಿ ಉಣ್ತಾಳಾ? ಇನ್ನೊಂದು ಕೈ ಖಾಲಿ ಇದೆ ಮಾತಾಡ್ತಾಳೆ, ಕೊಡು' ಅಂದಳು. ಮಾರುತ್ತರ ನೀಡದೆ, ಅವಳಜ್ಜಿಗೆ ಫೋನ್ ಕೊಟ್ಟೆ.

ಇದಾದ ಮರುದಿನ, ಕೃತಿಕಾಳೊಂದಿಗೆ ನಾನು ಫೋನ್ನಲ್ಲಿ ಮಾತಾಡ್ತಾ, ಮಮ್ಮಿ ಜತೆ ಮಾತಾಡೊದಿದೆ, ಅವಳಿಗೆ ಫೋನ್ ಕೊಡು' ಅಂದೆ.

'ಮಮ್ಮಿ ಊಟಮಾಡುತ್ತಿದ್ದಾಳೆ' ಅಂದಳು. 'ಅವಳೇನು ಎರಡೂ ಕೈಯಲ್ಲಿ ಉಣ್ತಾಳಾ. ಒಂದ್ ಕೈ ಖಾಲಿ ಇಲ್ಲವೆ?' ನಿನ್ನೆ ಅವಳು ಕೊಟ್ಟಿದ್ದ ಉತ್ತರವನ್ನೆ ನಾನು ಪುನರುಚ್ಚರಿಸಿದರೆ...

'ಅಯ್ಯೋ ತಾತಾ, ಬಾಯಲ್ಲಿ ತುತ್ತು ಇರೂವಾಗ ಹೇಗೆ ಮಾತಾಡ್ತಾಳೆ. ಅವಳ ಬಾಯಿ ಖಾಲಿ ಇರ್ಬೇಕಲ್ಲಾ' ಛಟಫಟ ಉತ್ತರಿಸಬೇಕೆ? ಎರಡನೆಯ ಸಲವೂ ನಾನು ನಿರುತ್ತರನಾಗಿದ್ದೆ.

**ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ**

# ಮಾನ ಹೋಯ್ತು

ನಮ್ಮ ಮನೆಯಂಗಳದಲ್ಲಿ ಒಂದು ದಿನ ಪುಟ್ಟ ಮಕ್ಕಳೆಲ್ಲರು ಸೇರಿ ಆಟವಾಡುತ್ತಿದ್ದರು. ಅವರ ಗಲಾಟೆ, ನಗು, ಅಳು ಎಲ್ಲವೂ ಮನೆಯೊಳಗೆ ನನಗೆ ಕೇಳಿಸುತ್ತಲೇ ಇತ್ತು. ಇದ್ದಕ್ಕಿದ್ದಂತೆ ಎರಡು–ಮೂರು ವರ್ಷದ ಪುಟ್ಟ ಮಗು 'ಮಾನ ಹೋಯ್ತು, ಮಾನ ಹೋಯ್ತು' ಎಂದು ಕೂಗುತ್ತಿರುವುದನ್ನು ಕೇಳಿ ನಾನು ಹೊರಗೆ ಓಡಿಬಂದೆ. ನೋಡಿದಾಗ ಅಲ್ಲಿ ಹೋಗುತ್ತಿದ್ದದ್ದು ಮಾನ ಅಲ್ಲ, ವಿಮಾನ!! ಎಲ್ಲರೂ ಆಕಾಶದತ್ತ ಮುಖಮಾಡಿ ಚಪ್ಪಾಳೆ ತಟ್ಟುತ್ತಿದ್ದರು!





**ಸುನಿತಾ ವಿ.ಕೆ., ಸುರತ್ಕಲ್**